ಗಿರಿಜಾ ಶಾಲೆಗೆ ಬರುತ್ತಿಲ್ಲ, ಫೇಲಾದ ಎಷ್ಟು ಹುಡಿಗೀರು ಅದೇ ಕ್ಲಾಸಿನಲ್ಲಿ ಓದ್ತಿದಾರೆ. ಗಿರಿಜೆನೂ ಬರಬಹುದಿತ್ತು' ಎಂದದ್ದಕ್ಕೆ ಆಯಿ, 'ಬಾಬುವಿನ ಹಟ. ಗಿರಿಜೆ ಪಾಸಾದ್ರೂ ಆಗ್ತಿದ್ರೆ ಕಳಿಸುತ್ತಿದ್ದನೊ ಏನೋ. ಅಷ್ನೀಗ ನೆಂಟಸ್ತಿಕೆ ಸಿಕ್ಕಿದ್ರೆ ಮದ್ವೆ ಮಾಡಿ ಕಳಿಸ್ತಾನಂತೆ' ಎಂದಿದ್ದಳು. ಗಿರಿಜೆಯಿಲ್ಲದೇ ಶಾಲೆಗೆ ಹೋಗಲು ಇಂದುವಿಗೆ ಎಳ್ಳಷ್ಟೂ ಮನಸ್ಸಿರಲಿಲ್ಲ. ಗಿರಿಜೆಯಂತೆ ತಾನೂ ಕೆಲಸಕ್ಕೆ ಹೋಗುವುದನ್ನು ಕಲ್ಪಿಸಿಕೊಂಡಳು. ಏನೋ ದೊಡ್ಡವಳಾದಂತೆ, ತೋಟದ ಕೆಲಸಗಳಲ್ಲಿ ಭಾಗಿಯಾಗುವುದನ್ನು ಕಲ್ಪಿಸುತ್ತಾ ಆಯಿಯ ಹತ್ರ, 'ಆಯಿ ಶಾಲೆಗೆ ಹೋಗಲೇಬೇಕಾ. ನಾನೂ ಕೆಲಸಕ್ಕೆ ಸೇರಲಾ' ಪೂರ್ತಿಯಾಗೋ ಮೊದಲೇ ಆಯಿ ಸಿಟ್ಟಿನಿಂದ, 'ನಿಂಗೇ ಆ ಗಿರಿಜೆಯ ಭೂತ ಹಿಡಿದಿದೆ. ಬಾಯಿ ಮುಚ್ಚಿಕೊಂಡು ಶಾಲೆಗೆ ನಡೀ. ನಮ್ಮ ಹಾಗೇ ಆಗೋದು ಬೇಡ ಅಂತ ನಿನ್ನ ದಾದಾನತ್ರ ಜಗಳ ಆಡಿ ಪೇಟೆ ಶಾಲೆಗೆ ಸೇರಿಸಿದ್ರೆ ಶಾಲೆಗೆ ಹೋಗಲ್ವಂತೆ...' ಕಣ್ಣು ಕೆಂಪು ಮಾಡಿದಾಗ ಇಂದು ಸದ್ದಿಲ್ಲದೇ ಹೋಗಿದ್ದಳು.

ಇಂದು ಶಾಲೆಗೆ ಹೋಗೋದು, ಆಗೊಮ್ಮೆ ಈಗೊಮ್ಮೆ ಗಿರಿಜೆ ಸಿಗೋದು ನಡೆದರೂ ಮೊದಲಿನಂತೆ ಮಾತು ಸಾಧ್ಯವಾಗುತ್ತಿರಲಿಲ್ಲ. ಇಂದುವೂ ತಾನು ಹತ್ತನೆಯ ತರಗತಿಗೆ ಬಂದಾಗ ಗಂಭೀರವಾಗಿದ್ದಳು. ಗಿರಿಜೆಯ ನೆನಪಾದರೂ ಹೋಗ್ತಾ ಹೋಗ್ತಾ ಗಿರಿಜೆ, ಇಂದುವಿನ ಮನದಲ್ಲಿ ಮಸುಕಾಗತೊಡಗಿದಳು.

ಹತ್ತನೆಯ ತರಗತಿ ಮುಗಿಸಿ ಕಾಲೇಜು ಸೇರಿದಾಗ ಗಿರಿಜೆ ಇಂದುವಿನ ಮನದಿಂದ ಸಂಪೂರ್ಣ ಮಾಯವಾಗಿದ್ದಳು. ಹೊಸ ಸ್ನೇಹಿತೆಯರು, ಮನದಲ್ಲಿ ಕಚಗುಳಿ ಮೂಡಿಸುವ ಹುಡುಗರ ಮೆಚ್ಚುಗೆಯ ನೋಟ, ರಾಶಿ ಪಾಠ ಎಲ್ಲವೂ ಇಂದುವಿನ ಮನಃಪಟಲದಿಂದ ಗಿರಿಜೆಯನ್ನು ಮಂಕಾಗಿಸಿತ್ತು. ಕಾಲೇಜಿನಿಂದ ಬರುತ್ತಿದ್ದಾಗ ಒಮ್ಮೆ ದಾರಿಯಲ್ಲಿ ಸಿಕ್ಕಿದ್ದಳು. 'ಅಯ್, ಇಂದಮ್ಮಾ, ಎಷ್ಟು ಚೆಂದ ಆಗಿದೀರಿ' ಎಂದು ಮೆಲ್ಲಗೆ, 'ನೆನಪಿದ್ಯ ನಾವು ಮಾತಾಡಿಕೊಳ್ತಿದ್ದ ವಿಷಯಗಳು' ಎಂದು ಬೆಳದಿಂಗಳಂತೆ ನಕ್ಕಿದ್ದಳು. ಇಂದುವಿಗೆ ಮುಜುಗರವಾಗಿ ಹ್ಮ... ಹ್ಮ... ಎಂದು ಮುಂದಡಿ ಇಟ್ಟಾಗ ಗಿರಿಜೆಯ ಕಣ್ಣಿನಲ್ಲಿ ನಿರಾಸೆ. ಸಾವರಿಸಿಕೊಂಡು ಅವಳು, 'ಸರೀ ಹೋಗ್ಬನ್ನಿ ಇಂದಮ್ಮ' ಎಂದಾಗ ಇಂದುಮತಿಗೆ ಮಾತೇ ಇಲ್ಲದಾಗಿತ್ತು. ಮುಂದೆ ನಡೆದರೂ, 'ಛೇ ಗಿರಿಜೆ ಹತ್ರ ನಾನು ಇನ್ನೂ ಮಾತಾಡಬೇಕಿತ್ತು' ಎಂದನಿಸಿತ್ತು. ದಾರಿಯುದ್ದಕ್ಕೂ, 'ಯಾಕೆ ಮೊದಲಿನಂತೆ ಗಿರಿಜೆಯ ಬಳಿ ಮಾತಾಡಲು ಆಗಿಲ್ಲ. ಏನದು ನನ್ನನ್ನು ತಡೆಯೋದು! ಬಾಬುವಿನ ಮಗಳೆಂದೇ! ಅಲ್ಲಾ ಹೆಚ್ಚು ಓದುತ್ತಿದ್ದೇನೆ ಎಂದೇ!' ಯೋಚನೆ ಇಂದುವಿಗೆ ಬಂದಿತ್ತು.

ಮರುದಿನ ಆಯಿ ಎಣ್ಣೆ ಹಾಕಿ ತಲೆ ಬಾಚುತ್ತಿದ್ದಾಗ, 'ಹಾಂ ಆಯಿ, ನಿನ್ನೆ ಗಿರಿಜಾ ಸಿಕ್ಕಿದ್ಲು. ಈಗ ಎಲ್ಲಿ ಕೆಲಸಕ್ಕೆ ಹೋಗ್ತಿದಾಳೆ ಅವಳು' ಎಂದು ಇಂದು ಮಾತು ಮುಗಿಸೋ ಮೊದಲೇ ಅಲ್ಲೇ ಇದ್ದ ಕಮಲಿ, 'ಅವ್ಳು ಬಿಡಿ. ಭಾರೀ ಮರ್ಜಿಯಲ್ಲಿದಾಳೆ. ವಿಶ್ನು ಭಟ್ರು ತುಂಬಾ ಚೆನ್ನಾಗಿ ನೋಡ್ಕೊತಿದಾರೆ' ಎಂದು ಕುಹಕವಾಗಿ ನಕ್ಕಾಗ, 'ಏಯ್ ಕಮಲಿ, ಸುಮ್ನೆ ನೀನು ಅವಳ ಮುಂದೆ ಏನೇನೋ ಪುರಾಣ ಎತ್ತಬೇಡ. ಕೆಲಸ ನೋಡು ಹೋಗು' ಎಂದು ಆಯಿ ಗದರಿಸಿ ಆಚೆ ಕಳಿಸಿದ್ದಳು. 'ಅದೇನು ಆಯಿ ಕಮಲಿ ಅಂದಿದ್ದು' ಕೇಳಿದ್ದಕ್ಕೆ, 'ಏನೂ ಇಲ್ಲ, ಅವಳಿಗೆ ತಲೆ ಸರಿ ಇಲ್ಲ. ಬಾಯಿಗೆ ಬಂದದ್ದು ಮಾತಾಡ್ತಾಳೆ ಅಷ್ಟೇ' ಎಂದು ಹೇಳಿ ಎದ್ದು ಹೋಗಿದ್ದಳು.

ಪಿಯುಸಿ ಪರೀಕ್ಷೆಗೆಂದು ಇಂದು ಓದಿಕೊಳ್ಳುತ್ತಿದ್ದ ದಿನಗಳು. ಹೊರಗೆ ಕಮಲಿಯ ಸುದ್ದಿ ಪ್ರಸಾರದ ಕೆಲಸ ನಡೆಯುತ್ತಿತ್ತು. ಕಮಲಿಯ ಗಂಟಲು ಜೋರೇ. ಬಾಯಿ ಆಡಿದಷ್ಟೇ ವೇಗದಲ್ಲಿ ಕೆಲಸವನ್ನೂ ಮಾಡುತ್ತಿದ್ದುದರಿಂದಲೇ ಆಯಿಗೆ ಅವಳು ಅನಿವಾರ್ಯವಾಗಿದ್ದು. ಸ್ವಲ್ಪ ಬಾಗಿಲು ಅಡ್ಡ ಮಾಡಿ ಓದಲು ಕೂರೋಣ ಎಂದು ಬಾಗಿಲ ಬಳಿ ಇಂದು ಬಂದಾಗ ಆಯಿಯ ಬಳಿ ಕಮಲಿ